



# ಕನಕದಾಸರು



ಯಮಾಂಶಸ್ಯ ಪರಾಭಕ್ತ್ಯಾ ಸುಪ್ರಸನ್ನೋ ಹರಿ: ಸ್ವಯಂ ।
ಯಸ್ಯಾಚಾರ್ಯೋ ವ್ಯಾಸರಾಯ: ತಂ ವಂದೇ ಕನಕಾಭಿಧಂ ।
yamaaMshasya paraabhaktyaa suprasannO hari: svayaM|
yasyaachaaryO vyaasaraaya: taMvaMdE kanakaabhidhaM|

यमांशस्य पराभक्त्या सुप्रसन्नो हरिः स्वयं ।
यस्याचार्यो व्यासरायः तं वंदे कनकाभिधं ।
యమాంశస్య పరాభక్త్యా సుప్రసన్నో హరి: స్వయం।
యస్యాచార్యో వ్యాసరాయ: తంవందే కనకాభిధం।
யமாம்ஶஸ்ய பராபக்த்யா ஸுப்ரஸந்நோ ஹரி: ஸ்வயம்|
யஸ்யாசார்யோ வ்யாஸராய: தம்வம்தே கநகாபிதம்|

**ಕಾಲ – 1508-1606**

**ಜನ್ಮನಾಮ – ತಿಮ್ಮಪ್ಪ ನಾಯಕ**

**ಜಾತಿ – ಕುರುಬ ಜನಾಂಗ**

**ಜನ್ಮ ಸ್ಥಳ – ಬಾಡ**

**ಸ್ಥಳ – ಕಾಗಿನೆಲೆ (ಹಾವೇರಿ ಜಿಲ್ಲೆ)**

ಆರಂಭಿಕ ವೃತ್ತಿ – ಇವರು ವೃತ್ತಿಯಲ್ಲಿ ಸೈನಿಕರಾಗಿ ಹೋರಾಟಗಾರರಾಗಿದ್ದರು. ಒಮ್ಮೆ ಯುದ್ಧದಲ್ಲಿ ಹೆಚ್ಚು ಗಾಯವಾಗಿದ್ದಾಗ, ಬೇಸರಗೊಂಡು ಯುದ್ಧವನ್ನು ಬಿಟ್ಟು, ದೇವರನಾಮಗಳನ್ನು ಬರೆದು ಪರಮಾತ್ಮನನ್ನು ಧ್ಯಾನಿಸತೊಡಗಿದರು. ಕುರುಬರು ಮೂಲತ: ಶ್ರೀವೈಷ್ಣವ ಪಂಥವನ್ನು ಅವಲಂಬಿಸಿದ್ದರೂ, ಕನಕದಾಸರು ವ್ಯಾಸರಾಜರ ಶಿಷ್ಯವೃತ್ತಿಯನ್ನು ಪಡೆದು, ವೈಷ್ಣವ ಪಂಥವನ್ನು ಅವಲಂಬಿಸಿದ್ದರು.

ಇವರ ಆರಾಧ್ಯದೇವ – ಆದಿಕೇಶವ (ಬಾಡದಾದಿ)

ಅಂಕಿತ – ಆದಿಕೇಶವ (ಬಾಡದಾದಿ)

ಇವರ ಮುಖ್ಯ ಗ್ರಂಥಗಳು –

೧.ನಳಚರಿತ್ರೆ – **481** ಪದ್ಯಗಳುಳ್ಳ ನಳದಮಯಂತಿಯರ ಪ್ರೇಮ ಕಥೆ

೨.ಹರಿಭಕ್ತಿಸಾರ – **110** ಪದ್ಯಗಳ ಭಾಮಿನಿ ಷಟ್ಪದಿಯ ಪದ್ಯ ರೂಪ

೩.ನೃಸಿಂಹಾವತಾರ – ನರಸಿಂಹಾವತಾರದ ಬಗ್ಗೆ ಒಂದು ಗ್ರಂಥ

೪.ರಾಮಧ್ಯಾನಚರಿತ್ರೆ – ರಾಗಿ – ಮತ್ತು ಅಕ್ಕಿಯ ಕುರಿತು ಗ್ರಂಥದಲ್ಲಿ ಪರಮಾತ್ಮನ ಶ್ಲಾಘನೆ

೫.ಮೋಹನತರಂಗಿಣಿ – ಒಂದು ಕಾವ್ಯ

೬.ಹಲವಾರು ದೇವರನಾಮಗಳು

೭.ತತ್ತ್ವಪದಗಳು

**ಕನಕ ಸಾಹಿತ್ಯಶೈಲಿ** - ಕನಕದಾಸರ ಹಲವಾರು ಸಾಹಿತ್ಯಗಳು ಬಲು ವಿಶೇಷವಾಗಿದೆ. ಅದನ್ನು ಅರ್ಥ ಮಾಡಿಕೊಳ್ಳುವುದು ಗುರುಗಳ ಕರುಣೆಯಿಲ್ಲದೆ ಅಸಾಧ್ಯ. ಅವರ ರಚನಾ ಶೈಲಿಯೇ ಹಾಗೆ. ಇಲ್ಲಿ ಕೆಲವು ಉದಾಹರಣೆಗಳನ್ನು ನೋಡೋಣ.

## ಕನಕದಾಸರ ಮುಂಡಿಗೆ -

**ಏನೇ ಮನವಿತ್ತೆ ಲಲಿತಾಂಗಿ**
**ಅಸಮಾನಗೋವಳ ಕುಲವಿಲ್ಲದವನೊಳು ।**
**ಮಗಗೆ ಮೈದುನನಾದ ಮಗಳಿಗೆ ಪತಿಯಾದ**
**ಮಗಳಿಗಳಿಯನಾದ ಅಳಿಯಗಳಿಯನಾದ ।**
**ಮಗಳ ಮಗಗೆ ಮೈದುನನಾಗಿ, ಮಾವನ**
**ಜಗವರಿಯನು ಕೊಂದ ಕುಲಗೇಡಿ ಗೋವಳ ।**
**ಅತ್ತೆಗೆ ವಲ್ಲಭನಾದ ಭೃತ್ಯರಿಗಾಳಾದ**
**ಚಿತ್ತ ಒಲಿದು ಚೆನ್ನಾದಿಕೇಶವನೊಳು ।**

**ಅಸಮಾನ ಗೋವಳ, ಕುಲವಿಲ್ಲದವನೊಳು** – ಇಲ್ಲಿ ಯಾವುದೇ ಕುಲವಿಲ್ಲದ ಗೋವುಗಳನ್ನು ಕಾಯುವ ನಾರಾಯಣನನ್ನು ಮೆಚ್ಚಿ ನೀನು ಹೇಗೆ ಮನವನಿತ್ತೆ ಎಂದು ಲಲಿತಾಂಗಿ ಲಕ್ಷ್ಮೀದೇವಿಯನ್ನು ಉನ್ನುದ್ದೇಶಿಸಿ ಕನಕದಾಸರು ಹೇಳಿದ್ದಾರೆ. ಕೃಷ್ಣ ಪರಮಾತ್ಮನು ಸಾಮಾನ್ಯ ಗೋಪಾಲಕರಂತೆ ಕಂಡುಬಂದರೂ ಅಸಮಾನ – ಅಪ್ರಾಕೃತನಾಗಿರುವನು, ಜ್ಞಾನಾನಂದಾತ್ಮಕ ರೂಪವುಳ್ಳವನು.

**ಮಗಗೆ ಮೈದುನನಾದ –**

೧. ಇಂದ್ರದೇವರು ಪರಮಾತ್ಮನ ಮುಖದಿಂದ ಸೃಷ್ಟರಾದವರು. ಅಂದರೆ ಪರಮಾತ್ಮನ ಮಗ. ಆ ಇಂದ್ರದೇವರ ಅವತಾರಿಯಾದ ಅರ್ಜುನನಿಗೆ ಕೃಷ್ಣನಾಗಿ ಅವತಾರ ಮಾಡಿದಾಗ ತನ್ನ ತಂಗಿಯಾಗಿದ್ದ ಸುಭದ್ರೆಯನ್ನು ವಿವಾಹ ಮಾಡಿ ಮೈದುನನಾಗಿದ್ದನು.

೨. ನರಕಾಸುರನು ಭೂದೇವಿಯಪುತ್ರ. ಪರಮಾತ್ಮನ ವರಾಹಾವತಾರ ಕಾಲದಲ್ಲಿ ಅವನ ಬೆವರಿನಿಂದ ಭೂತಾಯಿಯಲ್ಲಿ ಜನಿಸಿದವನು. ಆದ್ದರಿಂದ ನರಕಾಸುರ ಪರಮಾತ್ಮನ ಮಗ. ಅವನ ತಂಗಿಯಾದ ಸೀತೆಯನ್ನು ವಿವಾಹವಾದ್ದರಿಂದ ಪರಮಾತ್ಮನು ನರಕಾಸುರನಿಗೆ ಭಾವಮೈದುನ.

**ಮಗಳಿಗೆ ಪತಿಯಾದ** –

೧. ಸಮುದ್ರದಲ್ಲಿ ಮುಳುಗಿದ್ದ ಭೂಮಿಯನ್ನು ತನ್ನ ವರಾಹಾವತಾರದಿಂದ ಮೇಲೆತ್ತಿ ಉದ್ಧಾರ ಮಾಡಿದ್ದರಿಂದ ಭೂತಾಯಿಯು ಪರಮಾತ್ಮನ ಮಗಳು. ಅಂತಹ ಭೂದೇವಿಯನ್ನು ತನ್ನ ಪತ್ನಿಯಂತೆ ಧರಿಸಿ ಭೂವರಾಹನಾಗಿ, ತನ್ನ ಮಗಳಿಗೇ ಪತಿಯಾದ ಪರಮಾತ್ಮ.

೨. ಸೀತೆ ಭೂದೇವಿಯ ಪುತ್ರಿ. ಭೂದೇವಿಯ ಪುತ್ರಿಯಾದ್ದರಿಂದ ಪರಮಾತ್ಮನಿಗೂ ಪುತ್ರಿಯೇ. ಅಂತಹ ಮಗಳನ್ನು ವಿವಾಹವಾದ ಶ್ರೀರಾಮಚಂದ್ರ.

**ಮಗಳಿಗೆ ಅಳಿಯನಾದ** – ಮೇಲೆ ಹೇಳಿದಂತೆ ಭೂದೇವಿ ಪರಮಾತ್ಮನ ಮಗಳು. ಅವಳ ಮಗಳೇ ಸೀತೆ (ಭೂಮಿಯಲ್ಲಿ ದೊರಕಿದವಳು). ಅವಳನ್ನು ರಾಮಚಂದ್ರನಾಗಿ ಭೂದೇವಿಗೇ ಅಳಿಯನಾದ – ಮಗಳಿಗೇ ಅಳಿಯನಾದ.

**ಅಳಿಯುಗಳಿಯನಾದ** – ಪರಮಾತ್ಮನ ಪಾದೋದಕವಾದ (ಪರಮಾತ್ಮನ ಪಾದದಿಂದ ಸೃಷ್ಟಿಯಾದ) ಗಂಗೆಯು ಪರಮಾತ್ಮನ ಮಗಳು. ಗಂಗೆಯ ಪತಿ ವರುಣ. ಆದ್ದರಿಂದ ವರುಣ ಅಳಿಯ. ಹೀಗೆ ಅಳಿಯನಾದ ಸಮುದ್ರರಾಜ ವರುಣನ ಪುತ್ರಿಯೆನಿಸಿದ (ಸಮುದ್ರಮಥನದಲ್ಲಿ ಉದ್ಭವಿಸಿದ) ಲಕ್ಷ್ಮೀದೇವಿಯನ್ನು ಪರಮಾತ್ಮನಿಗೆ ಸಮರ್ಪಿಸಿದರಿಂದ ಅಳಿಯಗಳಿಯನಾದ.

**ಮಗಳ ಮಗಗೆ ಮೈದುನನಾಗಿ ಮಾವನ ಜಗವರಿಯನು ಕೊಂದ** – ಭಗವಂತನ ಮಗಳು ಭೂದೇವಿ. ಅವಳ ಮಗ ನರಕಾಸುರ. ನರಕಾಸುರ ಭೂಮಿಯಲ್ಲೇ ಅವತರಿಸಿದ್ದನು. ಸೀತಾದೇವಿಯೂ ಭೂಮಿಯಲ್ಲೇ ಜನಿಸಿದ್ದರಿಂದ ನರಕಾಸುರನ ಸಹೋದರಿ. ಆದ್ದರಿಂದ ಶ್ರೀರಾಮನು ನರಕಾಸುರನಿಗೆ ಭಾವಮೈದುನ. ಮತ್ತು ನರಕಾಸುರನು ಹದಿನಾರು ಸಾವಿರ ಸ್ತ್ರೀಯರನ್ನೂ ಬಂಧಿಸಿಟ್ಟು ಸಾಕಿದ್ದರಿಂದ ಅವರಿಗೆ ತಂದೆಯಾಗಿದ್ದನು. ಮತ್ತು ಆ ಸ್ತ್ರೀಯರನ್ನೆಲ್ಲ ವಿವಾಹವಾಗಿದ್ದರಿಂದಲೂ ನರಕಾಸುರನು ಮಾವನಾಗಿರುವನು ಕೃಷ್ಣನಿಗೆ. ಅಂತಹ ಮಾವನನ್ನೇ ಕೊಂದವನು. ಮತ್ತು ಇನ್ನೊಂದು ಅರ್ಥ **ಮಾವಾನ ಕೊಂದವ**ನೆಂದರೆ ಕಂಸನನ್ನು ಕೊಂದವನೆಂತಲೂ ಹೇಳಬಹುದು.

ಮಗಳು ಎಂದರೆ ಗಂಗೆ. ಅವಳ ಮಗನೆಂದರೆ ಸಮುದ್ರದಲ್ಲಿ ಹುಟ್ಟಿದ ಚಂದ್ರ. ಇವನು ಸಾಗರನ ಮಗನೂ ಆಗಿದ್ದಾನೆ. ಅವನ ಜೊತೆಗೇ ಹುಟ್ಟಿದ ಲಕ್ಷ್ಮೀದೇವಿಯು ಚಂದ್ರನಿಗೆ ಅಕ್ಕಳಾಗುತ್ತಾಳೆ. ಇವಳನ್ನು ವಿವಾಹವಾದ್ದರಿಂದ ಚಂದ್ರನಿಗೆ ಮೈದುನನಾದನು.

**ಅತ್ತೆಗೆ ವಲ್ಲಭನಾದ** – ಸೀತೆಯ ತಾಯಿಯು ರಾಮನಿಗೆ ಅತ್ತೆ (ಭೂದೇವಿ). ಆ ಅತ್ತೆಯಾದ ಭೂದೇವಿಯನ್ನು ವರಾಹರೂಪದಿಂದ ಪತ್ನಿಯಾಗಿ ಸ್ವೀಕರಿಸಿದ್ದರಿಂದ ಅತ್ತೆಗೆ ವಲ್ಲಭನಾದ ಪರಮಾತ್ಮ

ಇದೊಂದು ಕನಕದಾಸರ ಮುಂಡಿಗೆಯ ಒಂದು ನೋಟ.

## “ದಾಸ ಮುಂಡಿಗೆ”

**ಪುಟ್ಟದಾಸನು ನಾನಲ್ಲ । ದಿಟ್ಟ ದಾಸನು ನಾನಲ್ಲ ।**
**ಸಿಟ್ಟು ದಾಸನು ನಾನಲ್ಲ । ಸುಟ್ಟ ದಾಸನು ನಾನಲ್ಲ ।**
**ಸುಡಗಾಡುದಾಸ ನಾನಲ್ಲ ।**
**ಕಷ್ಟದಾಸ ನಾನಲ್ಲ । ಕೊಟ್ಟದಾಸ ನಾನಲ್ಲ ।**
**ಹೊಟ್ಟೆದಾಸ ನಾನಲ್ಲ । ಇಟ್ಟಿಗೆ ದಾಸ ನಾನಲ್ಲ ।**
**ಶಿಷ್ಟದಾಸ ನಾನಲ್ಲ । ನಿಷ್ಠದಾಸ ನಾನಲ್ಲ ।**
**ಭ್ರಷ್ಟದಾಸ ನಾನಲ್ಲ । ಶ್ರೇಷ್ಠದಾಸ ನಾನಲ್ಲ ।**
**ವಿತ್ತದಾಸ ನಾನಲ್ಲ । ಹುತ್ತದಾಸ ನಾನಲ್ಲ ।**
**ನಾನು ಈ ಷೋಡಶ ದಾಸರುಗಳ ದಾಸಾನು ದಾಸರ ದಾಸಿಯರ**
**ಮನೆಯ ಮಂಕುದಾಸರ ಮನೆಯ ಶಂಕುದಾಸ ಬಾಡದಾದಿ ಕೇಶವ ॥**

ಅರ್ಥ –

ಪುಟ್ಟದಾಸನು ನಾನಲ್ಲ – ಧ್ರುವರಾಯನು (ಧ್ರುವರಾಯರು ಪುಟ್ಟವಯಸ್ಸಿನಲ್ಲೇ ತಪಸ್ಸನ್ನಾಚರಿಸಿದ್ದರು)

ದಿಟ್ಟದಾಸನು ನಾನಲ್ಲ – ತನ್ನ ತಂದೆ ಕೊಟ್ಟ ಎಲ್ಲ ಚಿತ್ರವಿಚಿತ್ರ ಹಿಂಸೆಗಳಿದ್ದಾಗ್ಯೂ ಹರಿಸರ್ವೋತ್ತಮ ಜ್ಞಾನಬಿಡದ ಪ್ರಹ್ಲಾದರಾಜರು.

ಸಿಟ್ಟುದಾಸನು – ಸಿಟ್ಟಿಗೆ ಹೆಸರು ವಾಸಿಯಾದ ದುರ್ವಾಸ, ವಿಶ್ವಾಮಿತ್ರ ಋಷಿಗಳು

ಸುಟ್ಟದಾಸನು – ರಾವಣನು ತನ್ನ ಬಾಲಕ್ಕೆ ಬೆಂಕಿಯಿಡಲು ಇಡೀ ಲಂಕೆಯನ್ನೇ ಸುಟ್ಟ ದಾಸ – ಹನುಮಂತ ದೇವರು

ಸುಡುಗಾಡುದಾಸ – ಸ್ಮಶಾನವಾಸಿ ರುದ್ರ, ಅಥವಾ ಹರಿಶ್ಚಂದ್ರ

ಕಷ್ಟದಾಸ – ಬಹಳ ಬಡತನದಲ್ಲಿ ಬೆಂದಿದ್ದ ಕುಚೇಲ

ಕೊಟ್ಟ ದಾಸ – ತನ್ನದೆಲ್ಲವನ್ನೂ ಹರಿನಿವೇದನ ಮಾಡಿ ಸಮರ್ಪಣ ಮಾಡಿದ ಬಲಿಚಕ್ರವರ್ತಿ

ಹೊಟ್ಟೇದಾಸ – ಭೀಮಸೇನ

ಇಟ್ಟಿಗೆದಾಸ – ಇಟ್ಟಿಗೆ ಮೇಲೆ ಪಾಂಡುರಂಗವಿಠಲನನ್ನು ಕುಳ್ಳಿರಿಸಿದ್ದ ಪುಂಡರೀಕ

ಶಿಷ್ಟದಾಸ – ತನ್ನ ಅಣ್ಣ ರಾವಣನು ಮಾಡಿದ ತಪ್ಪನ್ನು ಅವನಿಗೆ ಅರಿವು ಹೇಳಿದ್ದ ವಿಭೀಷಣ

ನಿಷ್ಠದಾಸ – ಭೀಷ್ಮ – ತಂದೆಗೆ ಕೊಟ್ಟ ಮಾತಿನ ನಿಷ್ಠೆ, ಅಂಬರೀಷ – ಏಕಾದಶಿ ನಿಷ್ಠೆ, ರುಕ್ಮಾಂಗದ – ಏಕಾದಶಿಯನ್ನು ಬಿಡಲಾರದೆ ತನ್ನ ಮಗನನ್ನೇ ಬಲಿಕೊಟ್ಟು ಏಕಾದಶಿವ್ರತವನ್ನಾಚರಿಸಿದನು

ಭ್ರಷ್ಟದಾಸ – ಅಜಾಮಿಳ ಬ್ರಾಹ್ಮಣ ಮತ್ತು ಮಾಧವ ಬ್ರಾಹ್ಮಣ

ಶ್ರೇಷ್ಠದಾಸ – ದಾಸಶ್ರೇಷ್ಠರಾದ ಜೀವೋತ್ತಮರಾದ ಮದ್ವಾಚಾರ್ಯರು

ವಿತ್ತದಾಸ – ಮೊದಲು ವಿತ್ತ – ಹಣಕ್ಕೆ ದಾಸರಾಗಿದ್ದ ಪುರಂದರದಾಸರು, ನಂತರ ವ್ಯಾಸರಾಯರ ಶಿಷ್ಯತ್ವ ವಹಿಸಿದ ನಂತರ ವಿತ್ತದಾಸರಾದರು – ಜ್ಞಾನಿಗಳ ದಾಸರಾದರು.

ಹುತ್ತದಾಸ – ಹುತ್ತದಲ್ಲಿ ಸಾವಿರಾರು ವರುಷ ಕಳೆದ ವಾಲ್ಮೀಕಿ

# “ಮಂಗಲ ಮುಂಡಿಗೆ”

**ಮಂಗಲಂ ಜಯಮಂಗಲಂ**

**ಅಂಧಕನನುಜನ ಕಂದನ ತಂದೆಯ ಕೊಂದನ ಶಿರದಲಿ ನಿಂದವನ ।**
**ಚೆಂದದಿ ಪಡೆದನ ನಂದನೆಯಳನೊಲವಿಂದದಿ ಧರಿಸಿದ ಮುಕುಂದನಿಗೆ ।೧।**
**ರಥವನಡರಿ ಸುರಪಥದಲಿ ತಿರುಗುವ ಸುತನಿಗೆ ಶಾಪವನಿತ್ತವನ ।**
**ಖತಿಯನ್ನು ತಡೆದನ ಸತಿಯ ಜನನಿ ಸುತ ಸತಿಯರನಾಳಿದ ಚತುರನಿಗೆ ।೨।**
**ಹರಿಯ ಮಗನ ಶಿರ ಹರಿದನ ತಂದೆಯ ಹಿರಿಯ ಮಗನ ತಮ್ಮನ ಪಿತನ ।**
**ಭರದಿ ಭಕ್ಷಿಸುವನ ಶಿರದಲಿ ನಟಿಸಿದ ವರಕಾಗಿನೆಲೆಯಾದಿಕೇಶವರಾಯಗೆ ।೩।**

ಅರ್ಥವಿವರಣೆ –

ಅಂಧಕನ – ಕುರುಡನಾದ ಧೃತರಾಷ್ಟ್ರನ, ಅನುಜನ – ತಮ್ಮನಾದ ಪಾಂಡುರಾಜನ, ಕಂದನ – ಮಗನಾದ ಯುಧಿಷ್ಟಿರನ, ತಂದೆಯ – ಪಿತನಾದ ಯಮಧರ್ಮರಾಯನನ್ನು ಕೊಂದನ – ಮಾರ್ಕಂಡೇಯನನ್ನು ಕರೆದುಕೊಂಡು ಹೋಗಲು ಬಂದ ಯಮನನ್ನಿ ಹೊಡೆಯಲು ಹೋದ ರುದ್ರನ, ಶಿರದಲಿ ನಿಂದವನ – ಶಿವನ ತಲೆಯಲ್ಲಿರುವ ಚಂದ್ರನ, ಚಂದದಿ ಪಡೆದನ – ಸಮುದ್ರಮಥನ ಕಾಲದಲ್ಲಿ ಪಡೆದ ಸಮುದ್ರನ ನಂದನೆಯಳ – ಪುತ್ರಿಯಾದ ಲಕ್ಷ್ಮೀದೇವಿಯನ್ನು ಧರಿಸಿದ–ಧರಿಸಿರುವಶ್ರೀಮನ್ನಾರಾಯಣನಿಗೆ ಮಂಗಳಮ್.

ರಥವನಡರಿ ಸುರಪಥದಿ ತಿರುಗುವ – ಮೇರು ಪರ್ವತವನ್ನು ಸುತ್ತುವ ಸೂರ್ಯನ, ಸುತನಿಗೆ – ಮಗನಾದ ಕರ್ಣನಿಗೆ, ಶಾಪವಿತ್ತವನ – ಶಾಪನೀಡಿದ ಪರಶುರಾಮನ, ಖತಿಯನು ತಡೆದವನ – ಮಂದದೃಷ್ಟಿಯಿಂದ ದರ್ಪವನ್ನು ಹೋಗಲಾಡಿಸಿದ ರಾಮಚಂದ್ರನ ಸತಿಯ – ಪತ್ನಿಯಾದ ಸೀತಾದೇವಿಯ, ಜನನಿ – ತಾಯಿಯಾದ ಭೂತಾಯಿಯ, ಸುತ – ನರಕಾಸುರನ, ಸತಿಯರನಾಳಿದ – ನಂತರದಲ್ಲಿ

ಪರಮಾತ್ಮನನ್ನು ವಿವಾಹವಾದ 16100 ನಾರೀಯರನ್ನು ವಿವಾಹವಾದ ಶ್ರೀ ಕೃಷ್ಣನಿಗೆ ಮಂಗಳ.

ಹರಿಯ ಮಗನ – ಸೂರ್ಯಪುತ್ರನಾದ ಕರ್ಣನ ಶಿರತರಿದವನ – ತಲೆಯನ್ನು ತೆಗೆದ ಅರ್ಜುನನ, ತಂದೆಯ – ಪಾಂಡುರಾಜನ, ಹಿರಿಯ ಮಗನ – ಧರ್ಮರಾಜನ, ತಮ್ಮನ – ತಮ್ಮನಾದ ಭೀಮಸೇನನ, ಪಿತನ – ತಂದೆಯಾದ ವಾಯುವನ್ನು ಭರದಿ ಭುಂಜಿಸುವನ – ವಾಯುಭಕ್ಷಕನಾದ ಕಾಲೀಯಸರ್ಪ, ಶಿರದಲಿ ನಟಿಸಿದ – ತಲೆಯ ಮಾಲೇ ನಾಟ್ಯವಾಡಿದ ಶ್ರೀ ಕೃಷ್ಣ ಪರಮಾತ್ಮನಿಗೆ ಮಂಗಳವಾಗಲಿ

Collection by Narahari Sumadhwa for www.sumadhwaseva.com